# ಭಗವದ್ಗೀತೆ ಮತ್ತು ಸಮಕಾಲೀನ ಭಾರತ

**ಸ್ವಾಮಿ ಅಘಹರಾನಂದ**

ಲೋಕೋತ್ತರ ಆಧ್ಯಾತ್ಮಿಕ ಕೃತಿಯಾದ ಭಗವದ್ಗೀತೆಯು ಎಲ್ಲ ಕಾಲಕ್ಕೂ, ಎಲ್ಲ ದೇಶಕ್ಕೂ, ಎಲ್ಲ ಜನಾಂಗಕ್ಕೂ ದಿವ್ಯಪಥವನ್ನು ತೋರಿಸಿಕೊಡುವ ಪವಿತ್ರ ಗ್ರಂಥವಾಗಿದೆ. ಈ ವಿಶ್ವವಿಶಾಲ ದೃಷ್ಟಿಕೋನವನ್ನು ಕುರಿತು ಇಲ್ಲಿ ಬರೆದಿರುವ ಲೇಖಕರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



### ಪೀಠಿಕೆ

ಗೀತೆಯ ಬೋಧನೆ ನಡೆದದ್ದು ಯುದ್ಧರಂಗದಲ್ಲಿ. ಬೋಧಿಸಿದ್ದು ಯೋಧನಾದ ಕೃಷ್ಣ ಮತ್ತು ಬೋಧನೆ ನೀಡಿದ್ದು ಯೋಧನಾದ ಅರ್ಜುನನಿಗೆ. ಜೀವನವೂ ಒಂದು ಯುದ್ಧರಂಗವೇ ಹಾಗೂ ನಾವೆಲ್ಲರೂ ಯೋಧರೇ ಆಗಿದ್ದೇವೆ. ಏಕೆಂದರೆ ಜೀವನವೆಂಬ ರಣರಂಗದಲ್ಲಿ ನಾವು ಅನೇಕ ಸಮಸ್ಯೆಗ, ಸವಾಲುಗಳನ್ನು ಎದುರಿಸುತ್ತಲೇ ಇರುತ್ತೇವೆ. ಹೀಗಾಗಿ ಗೀತೆಯ ಸಂದೇಶ ನಮ್ಮ ಇಂದಿನ ಸಮಾಜಕ್ಕೆ ಮತ್ತು ರಾಷ್ಟ್ರಕ್ಕೆ ಉಪಯುಕ್ತವಾಗಿರಲೇಬೇಕು. ಈ ನಿಟ್ಟಿನಲ್ಲಿ ಗೀತೆಯ ಕೆಲವಾರು ಸಂದೇಶಗಳ ಬಗ್ಗೆ ಹಾಗೂ ಅವು ಹೇಗೆ ಸಮಕಾಲೀನ ಭಾರತಕ್ಕೆ ಪ್ರಸ್ತುತವಾಗಬಲ್ಲವು ಎಂಬುದರ ಬಗ್ಗೆ ಈ ಲೇಖನದಲ್ಲಿ ವಿಮರ್ಶಿಸೋಣ.

### ಗೀತೆಯ ಪಲ್ಲವಿ

ಗೀತೆಯು ವೇದಾಂತದ ಹಾಗೂ ಆತ್ಮತತ್ತ್ವದ ಹಲವಾರು ಆಯಾಮಗಳನ್ನು ನಮ್ಮ ಮುಂದಿಡುತ್ತದೆ. ಆದರೆ ಪಲ್ಲವಿಯ ರೂಪದಲ್ಲಿ ಬರುವ ಪದಗಳಲ್ಲಿ ಪ್ರಮುಖವಾಗಿ ಎರಡು. ಮೊದಲನೆಯದು ‘ಯುದ್ಧವನ್ನು ಮಾಡು’ ಎಂದು ಹಾಗೂ ಎರಡನೆಯದು ‘ಶೋಕಿಸಬೇಡ’ ಎಂಬುದು.

ಯುದ್ಧ ಎಂಬುದು ಅರ್ಜುನನಿಗೆ ಆ ಸಂದರ್ಭದಲ್ಲಿ ಒದಗಿದ್ದ ಕರ್ತವ್ಯ. ಹೀಗಾಗಿ ಅರ್ಜುನನಿಗೆ ‘‘ಯುದ್ಧವನ್ನು ಮಾಡು’’ ಎಂದರೆ ಅದು ನಮಗೆ, ‘‘ಕರ್ತವ್ಯವನ್ನು ಮಾಡು. ಬಿಡಬೇಡ’’ ಎಂಬುದಾಗುತ್ತದೆ. ನಾವು ಕೆಲಸವನ್ನು ಬಿಡಲಾಗುವುದಿಲ್ಲ. ಪ್ರತಿಯೊಬ್ಬರೂ ಕೆಲಸ ಮಾಡುತ್ತಲೇ ಇರಬೇಕಾಗುತ್ತದೆ. ಇದನ್ನು ಗೀತೆಯು ಪುನಃ ಪುನಃ ಹೇಳುತ್ತದೆ. ಅದಲ್ಲದೆ ಕೇವಲ ಕೆಲಸವನ್ನು ತ್ಯಜಿಸಿದ, ನಿರ್ಲಕ್ಷಿಸಿದ ಮಾತ್ರಕ್ಕೆ ನಾವು ಈ ಲೋಕದ ಹಾಗೂ ಪರಲೋಕದ ಏಳ್ಗೆಯನ್ನು ಸಾಧಿಸಲಾರೆವು. ಈ ಸಂಗತಿಯನ್ನು ಗೀತೆ ಒತ್ತಿ ಒತ್ತಿ ಹೇಳುತ್ತದೆ. ಪ್ರಸ್ತುತ ಸಮಾಜ ಕ್ರಿಯಾಪರ. ಇಂತಹ ಕ್ರಿಯಾಪರ ಸಮಾಜಕ್ಕೆ ಗೀತೆಯ ಕರ್ತವ್ಯಪರವಾದ ಸಂದೇಶ ಪ್ರಾಮುಖ್ಯತೆ ಪಡೆಯುತ್ತದೆ.

ಎರಡನೆಯದು ''ಶೋಕಿಸಬೇಡ'' ಎಂಬುದು. ನಾವೆಲ್ಲರೂ ಕೆಲಸ ಮಾಡುತ್ತಲೇ ಇರುತ್ತೇವೆ. ದಿನನಿತ್ಯ ಅನೇಕ ಸಮಸ್ಯೆಗಳೊಂದಿಗೆ ಹೋರಾಡಿ ಏಳ್ಗೆ ಸಾಧಿಸುತ್ತಲೇ ಇರಬೇಕಾಗುತ್ತದೆ. ಆದರೆ ಈ ಎಲ್ಲ ಪ್ರಕ್ರಿಯೆಯಲ್ಲಿ ನಾವು ಸಂತೋಷದಿಂದ ಹಾಗೂ ಸಮಾಧಾನದಿಂದ ಇದ್ದೇವೆಯೆ? ನಮ್ಮ ಸುತ್ತ ಮುತ್ತ ಸಂತೋಷ ಹಾಗೂ ಸಮಾಧಾನವನ್ನು ಪಸರಿಸುತ್ತಿದ್ದೇವೆಯೆ? ಎಂಬುದು ಪ್ರಶ್ನೆ. ದುಃಖ, ದುಗುಡ, ಚಿಂತೆ, ಭಯ ಹಾಗೂ ವೈಮನಸ್ಯ – ಇವುಗಳು ನಾವು ಮಾಡುತ್ತಿರುವ ಕೆಲಸದ ಫಲಶ್ರುತಿಯಾಗಿವೆ. ಆದರೆ ಗೀತಾಚಾರ್ಯನಾದ ಕೃಷ್ಣನು ಬೋಧಿಸುವುದು ''ಶೋಕಿಸಬೇಡ'' ಎಂದು. ಹಾಗಾದರೆ ನಾವು ಮಾಡುವ ಕೆಲಸದ ರೀತಿಯಲ್ಲಿ ಯಾವುದೋ ವ್ಯತ್ಯಾಸ ಉಂಟಾಗಿದೆ. ಎಂದರೆ ನಾವು ಕೆಲಸ ಮಾಡುವಾಗ ನಮ್ಮಲ್ಲಿ ಇರಬೇಕಾದ ಮನಸ್ಥಿತಿಯ ಬಗ್ಗೆ ಚಿಂತಿಸಿಲ್ಲ ಎಂದೇ ಅರ್ಥ. ಈ ದಿಸೆಯಲ್ಲಿ ಗೀತೆಯ ಕರ್ಮಯೋಗ ಪ್ರಾಮುಖ್ಯತೆ ಪಡೆಯುತ್ತದೆ.

### ಕರ್ಮಕ್ಕೆ ಮಾತ್ರ ನಿನಗೆ ಅಧಿಕಾರ, ಫಲಕ್ಕಲ್ಲ

ಕರ್ಮಯೋಗದ ಸಾರವನ್ನು ಹೇಳುವ ಶ್ಲೋಕವೆಂದರೆ '**ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ**' ಎಂಬುದು. ಇದೊಂದು ಗೀತೆಯ ಅತ್ಯಂತ ಪ್ರಸಿದ್ಧವಾದ ಶ್ಲೋಕ. ಅಂತೆಯೇ ಈ ಶ್ಲೋಕದ ಕುರಿತಾಗಿ ಅನೇಕ ಗೊಂದಲಗಳು ಉಂಟು. ''ಕರ್ಮದಲ್ಲಿಯೇ ನಿನಗೆ ಅಧಿಕಾರವು. ಕರ್ಮಫಲದಲ್ಲಿ ಎಂದಿಗೂ ಆಸಕ್ತಿಯಾಗದಿರಲಿ. ಕರ್ಮಫಲಕ್ಕೆ ಕಾರಣನಾಗದೆ ಇರು. ಕರ್ಮವನ್ನು ಬಿಡುವುದರಲ್ಲಿ ನಿನಗೆ ಪ್ರೀತಿಯಾಗದಿರಲಿ'' – ಇದು ಈ ಶ್ಲೋಕದ ತಾತ್ಪರ್ಯ.

ಈ ಶ್ಲೋಕದ ಕುರಿತಾಗಿ ಇರುವ ಸಂದೇಹಗಳೆಂದರೆ, ಫಲದಲ್ಲಿ ನಮಗೆ ಅಧಿಕಾರವಿಲ್ಲ ಎನ್ನುವುದಾದರೆ, ನಾವು ಮಾಡುವ ಕೆಲಸದ ಫಲದ ಅಪೇಕ್ಷೆ ಪಡಬಾರದು ಎಂದರೆ, ಕೆಲಸವನ್ನು ಏಕೆ ಮಾಡಬೇಕು ಎಂಬುದು. ಓರ್ವ ವಿದ್ಯಾರ್ಥಿ ಅಧ್ಯಯನ ಮಾಡುವುದೇ ಉತ್ತಮ ಅಂಕ ಗಳಿಸಿ, ಗೌರವಾನ್ವಿತ ಉದ್ಯೋಗಗಳಿಸಲು. ಅಂಕದ ಹಾಗೂ ಉದ್ಯೋಗದ ನಿರೀಕ್ಷೆ ಪಡಬಾರದು ಎಂದಾದರೆ, ಆತ ಅಧ್ಯಯನವನ್ನು ಏಕೆ ಮಾಡಬೇಕು? ಈ ಸಂದೇಹ ಪ್ರತಿ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ಫಲದ ನಿರೀಕ್ಷೆ ಇಲ್ಲದೆ ಕೆಲಸದಲ್ಲಿ ಉತ್ಸಾಹ ಹೇಗೆ ಉಂಟಾಗುತ್ತದೆ?

ಇನ್ನೊಂದು ಸಂಶಯವೇನೆಂದರೆ, ಫಲದ ಅಪೇಕ್ಷೆ ಪಡಬಾರದು ಎಂದಾದಲ್ಲಿ ನಾವು ಜೀವನದಲ್ಲಿ ಗುರಿಯನ್ನೇ ಇಟ್ಟುಕೊಳ್ಳಬಾರದೆ? ಅಥವಾ ಗುರಿಯ ಸಾಧನೆಗಾಗಿ ಯೋಜನೆ (ಪ್ಲಾನಿಂಗ್) ಮಾಡಬಾರದೆ? ಎಂಬುದು. ಇದಕ್ಕೆ ಉತ್ತರವಾಗಿ ಈ ಕೆಳಗಿನ ವಿವರಣೆ ಗಮನಿಸಬಹುದು. ನಾವೆಲ್ಲರೂ ಕೂಡ ಕೆಲಸ ಮಾಡುತ್ತಲೇ ಇರಬೇಕಾಗುತ್ತದೆ. ಕೆಲಸವನ್ನು ಬಿಟ್ಟು ಯಾರೊಬ್ಬರೂ ಇರಲಾರರು. ಹಾಗೆಯೇ ಪ್ರತಿಯೊಂದು ಕೆಲಸಕ್ಕೂ ಆಯಾ ಫಲವಿದ್ದೇ ಇರುತ್ತದೆ. ಮೇಲಾಗಿ '**ಪ್ರಯೋಜನಮ್ ಅನುದ್ದಿಶ್ಯ ನ ಮಂದೋಽಪಿ ಪ್ರವರ್ತತೇ**' ಎಂಬ ಮಾತಿದೆ. ಎಂದರೆ, 'ಪ್ರಯೋಜನವಿಲ್ಲದೆ ಅಥವಾ ಫಲ ದೊರಕುವುದಿಲ್ಲ ಎಂದಾದರೆ ಮೂರ್ಖ ಕೂಡ ಕೆಲಸವನ್ನು ಮಾಡುವುದಿಲ್ಲ' ಎಂದರ್ಥ. ಹೀಗಿದ್ದ ಮೇಲೆ, ಫಲದ ಅಪೇಕ್ಷೆ ಪಡಬಾರದು ಎಂದು ಕೃಷ್ಣ ಏಕೆ ಹೇಳಿದ್ದಾನೆ?

ಇದಕ್ಕೆ ಉತ್ತರವಾಗಿ ನಾವು ಭಗವದ್ಗೀತೆಯ ೧೮ನೆ ಅಧ್ಯಾಯವನ್ನು ನೋಡಬೇಕಾಗುತ್ತದೆ. ಅದರಲ್ಲಿ ಕೃಷ್ಣನು ಯಾವುದೇ ಕೆಲಸದಿಂದ ಫಲ ಉಂಟಾಗಬೇಕಾದರೆ ಅದು ಯಾವ ಯಾವ ಅಂಶವನ್ನು ಅವಲಂಬಿಸಿರುತ್ತದೆ ಎಂದು ತಿಳಿಸಿದ್ದಾನೆ. ಆ ಅಂಶಗಳು ಯಾವುವೆಂದರೆ,

೧) ಅಧಿಷ್ಠಾನ ಅಥವಾ ಕೆಲಸದ ಸ್ಥಳ. ಯಾವ ಪ್ರದೇಶದಲ್ಲಿ ಕೆಲಸ ನಡೆಯುತ್ತದೆಯೋ, ಕೆಲಸದ ಮೇಲೆ ಆಯಾ ಪ್ರದೇಶದ ಪರಿಣಾಮ ಇದ್ದೇ ಇರುತ್ತದೆ.

೨) ಕರ್ತಾ ಅಥವಾ ಕೆಲಸ ಮಾಡುವಾತ. ಕೆಲಸದ ಮೇಲೆ ಕೆಲಸ ಮಾಡುವಾತನ ಮನಃಸ್ಥಿತಿ, ಸಾಮರ್ಥ್ಯ, ಪ್ರಯತ್ನ ಇತ್ಯಾದಿಗಳ ಪರಿಣಾಮ ಇರುತ್ತದೆ.

೩) ಕರಣ ಅಥವಾ ಉಪಕರಣಗಳು. ಯಾವುದರಿಂದ ನಾವು ಕೆಲಸ ಮಾಡುತ್ತೇವೆಯೋ ಅದಕ್ಕೆ ಬೇಕಾದ ಉಪಕರಣಗಳು, ಸಲಕರಣೆಗಳು – ಇವೂ ಕೂಡ ಫಲದ ಮೇಲೆ ಪ್ರಭಾವ ಬೀರುತ್ತವೆ.

೪) ಪೃಥಕ್ ಚೇಷ್ಟಾ ಅಥವಾ ಇತರೆ ಚಟುವಟಿಕೆಗಳು. ಪ್ರತಿಯೊಂದು ಕೆಲಸವು ಅನೇಕ ಚಟುವಟಿಕೆಗಳನ್ನು ಒಳಗೊಂಡಿರುತ್ತದೆ. ಆ ಎಲ್ಲ ಚಟುವಟಿಕೆಗಳನ್ನು ಇಲ್ಲಿ ಪರಿಗಣಿಸಬೇಕಾಗುತ್ತದೆ.

೫) ದೈವ ಅಥವಾ ವಿಧಿ. ನಮ್ಮ ಹಾಗೂ ಇತರರ ಪೂರ್ವ ಕರ್ಮದ ಫಲಕೂಡ ಇಲ್ಲಿ ಪರಿಗಣಿಸಬೇಕಾಗುತ್ತದೆ.

ಹೀಗೆ ಒಂದು ಕೆಲಸದ ಫಲ ಸರಿಯಾಗಿ, ನಾವೆಂದುಕೊಂಡಂತೆ ದೊರಕಬೇಕಾದರೆ, ಈ ೫ ಅಂಶಗಳು ಸರಿಯಾಗಿ ಇರಬೇಕಾಗುತ್ತದೆ. ಇವುಗಳಲ್ಲಿ ಒಂದರಲ್ಲಿ ಏರುಪೇರು ಉಂಟಾದರೂ ಕೂಡ, ನಾವು ಅಪೇಕ್ಷಿಸಿದಂಥ ಫಲ ದೊರಕುವುದಿಲ್ಲ. ಮೇಲಿನ ೫ ಅಂಶಗಳಲ್ಲಿ ನಮ್ಮ ಸಂಪೂರ್ಣ ನಿಯಂತ್ರಣದಲ್ಲಿರುವುದು ಪ್ರಾಯಶಃ ೨ ರಿಂದ ೩ ಅಂಶಗಳು ಮಾತ್ರ. (ಅದೂ ಪೂರ್ಣ ಪ್ರಮಾಣದಲ್ಲಿ ಅಲ್ಲ). ಮಿಕ್ಕ ಅಂಶಗಳ ಮೇಲೆ ನಮಗೆ ನಿಯಂತ್ರಣವೇ ಇಲ್ಲ. ಹೀಗಿರುವಾಗ, ಫಲವು ಸಂಪೂರ್ಣವಾಗಿ ನಾವೆಂದುಕೊಂಡಂತೆ ಬರಬೇಕು ಎಂದರೆ ಅದು ಹೇಗೆ ಸಾಧ್ಯವಾದೀತು?

ನಾವೆಂದುಕೊಂಡಂತೆ ಫಲ ಬರದೆ ಹೋದಾಗ ಸಹಜವಾಗಿಯೇ ನಮ್ಮಲ್ಲಿ ಬೇಸರ, ಅಸಮಾಧಾನ, ಅಶಾಂತಿ, ಉದ್ವಿಗ್ನತೆ ಉಂಟಾಗುತ್ತದೆ. ಆದ್ದರಿಂದಲೇ ಕೆಲಸದ ಫಲದ ಮೇಲೆ

ಇಷ್ಟೆಲ್ಲ ಅಂಶಗಳ ಪರಿಣಾಮವನ್ನು ಪರಿಗಣಿಸಿ ನಾವು ವರ್ತಿಸ ಬೇಕಾಗುತ್ತದೆ. ಆಗ ಮಾತ್ರ ನಾವು ನಮ್ಮ ಮನಸ್ಸಿನ ಸಮಾಧಾನ ಹಾಗೂ ಶಾಂತತೆಯನ್ನು ಕಾಪಾಡಬಹುದು. ಈ ಕಾರಣದಿಂದಾ ಗಿಯೇ ಗೀತೆಯಲ್ಲಿ, ''ಕರ್ಮದಲ್ಲಿಯೇ ನಿನಗೆ ಅಧಿಕಾರ. ಕರ್ಮಫಲದಲ್ಲಿ ಎಂದಿಗೂ ಆಸಕ್ತಿಯಾಗದಿರಲಿ'' ಎಂದು ಹೇಳಿರುವುದು.

ಇಲ್ಲಿ ಫಲದ ಮೇಲೆ ಸಂಪೂರ್ಣ ನಿಯಂತ್ರಣವಿಲ್ಲ ಎಂಬುದು ಒಂದು ಮುಖ್ಯ ಅಂಶ. ಹಾಗೆಂದ ಮಾತ್ರಕ್ಕೆ ನಾವು ಆಲಸಿಗಳಾಗಿ ಅಥಾವ ದೈವವನ್ನು ನಂಬಿ, ಹಣೆಬರಹ ಇದ್ದಂತೆ ಆಗುತ್ತದೆ ಎಂದು ಕೈಚೆಲ್ಲಿ, ಅಸಹಾಯಕರಾಗಿ ಕುಳಿತುಕೊಳ್ಳ ಬೇಕೆಂದು ಅರ್ಥವಲ್ಲ. ಏಕೆಂದರೆ ಕೆಲಸದ ಫಲಕ್ಕೆ ಪುರುಷ ಪ್ರಯತ್ನ ಕೂಡ ಮುಖ್ಯ. ಅದನ್ನೇ ಕರ್ತಾ ಅಥವಾ ಮಾಡು ವಾತನ ಪ್ರಯತ್ನ ಎಂದು ೩ನೇ ಅಂಶದಲ್ಲಿ ಹೇಳಲಾಗಿದೆ. ಮೇಲಾಗಿ, ನಾವು ಸುಮ್ಮನೆ ಇರಲು ಸಾಧ್ಯವಿಲ್ಲ ಎಂದು ಗೀತೆ ಯಲ್ಲಿ ಪುನಃ ಪುನಃ ಹೇಳಲಾಗಿದೆ. ಏಕೆಂದರೆ ನಮ್ಮ ಸ್ವಭಾವವೇ ನಮ್ಮ ಮೂಲಕ ಕೆಲಸ ಮಾಡಿಸುತ್ತದೆ. ಬಲವಂತವಾಗಿ ಕೆಲಸ ವನ್ನು ಮಾಡದಿದ್ದಲ್ಲಿ, ಅದು ನಮ್ಮಲ್ಲಿ ಇನ್ನಷ್ಟು ಅಸಂತೋಷ, ಅಸಮಾಧಾನಗಳನ್ನೇ ಉಂಟುಮಾಡುತ್ತದೆ. ಆದ್ದರಿಂದಲೇ ಕೃಷ್ಣನು, ''ಕರ್ಮವನ್ನು ಬಿಡುವುದರಲ್ಲಿ ನಿನಗೆ ಪ್ರೀತಿಯಾಗ ದಿರಲಿ'' ಎಂದು ಹೇಳಿರುವುದು.

ಫಲದ ಮೇಲೆ ನಮಗೆ ನಿಯಂತ್ರಣವಿಲ್ಲ ಎಂದ ಮಾತ್ರಕ್ಕೆ ನಾವು ಗುರಿಯನ್ನು ಇಟ್ಟುಕೊಳ್ಳಬೇಕಾಗಿಲ್ಲ ಅಥವಾ ಯೋಜನೆ ರೂಪಿಸಬೇಕಾಗಿಲ್ಲ ಎಂದೇನೂ ಇಲ್ಲ. ಏಕೆಂದರೆ ನಮ್ಮ ಪ್ರಯತ್ನ ನಾವು ಮಾಡಲೇಬೇಕು. ಆ ಪ್ರಯತ್ನದ ಅಂಗವಾಗಿ ಯೋಜನೆ ರೂಪಿಸುವುದು, ಗುರಿಯನ್ನು ಇಟ್ಟುಕೊಳ್ಳುವುದು ಮಾಡಲೇ ಬೇಕಾಗುತ್ತದೆ.

ಉದಾಹರಣೆಗೆ ಕ್ರಿಕೆಟ್ ಪಂದ್ಯವನ್ನೇ ತೆಗೆದುಕೊಳ್ಳಬಹುದು. ಆ ಕ್ರೀಡೆಯಲ್ಲಿ ವಿಜಯ ಸಾಧಿಸಲು ೧) ಅಧಿಷ್ಠಾನ ಎಂದರೆ ಕ್ರೀಡೆಯಾಗುವ ಮೈದಾನ, ಅಲ್ಲಿ ಸುತ್ತಮುತ್ತಲಿನ ಹವಾಮಾನ ಇತ್ಯಾದಿ ಪ್ರಮುಖ ಪಾತ್ರವಹಿಸುತ್ತದೆ. ೨) ಕರ್ತಾ ಎಂದರೆ ಪಂದ್ಯ ಆಡುವ ಆಟಗಾರರ ಸಾಮರ್ಥ್ಯ, ಆರೋಗ್ಯ ಇತ್ಯಾದಿ ಗಳು. ೩) ಕರಣ ಎಂದರೆ ಬಳಕೆಯಾಗುವ ಬಾಲ್, ಬ್ಯಾಟ್ ಹಾಗೂ ಇತರ ಉಪಕರಣಗಳು, ಲೈಟ್ ಇತ್ಯಾದಿ ಮುಖ್ಯ ವಾಗುತ್ತವೆ. ೪) ಪೃಥಕ್ ಚೇಷ್ಟಾ ಎಂದರೆ ಆಟಕ್ಕೆ ಪೂರಕವಾದ ಹಲವಾರು ಚೇಷ್ಟೆಗಳು, ಕ್ಯಾಚ್ ಹಿಡಿಯುವುದು, ಬಾಲ್ ಎಸೆ ಯುವುದು, ರನ್ ಗಾಗಿ ಓಡುವುದು ಇತ್ಯಾದಿ ೫) ದೈವ ಎಂದರೆ ಹವಾಮಾನ ವೈಪರೀತ್ಯಗಳು, ಮಳೆ, ಗಾಳಿ ಇತ್ಯಾದಿಗಳು, ಜೊತೆಗೆ ಕ್ರೀಡಾಪಟುಗಳ ಹಿಂದಿನ ಕರ್ಮದ ಫಲ ಮುಖ್ಯ ಪಾತ್ರ ವಹಿಸುತ್ತದೆ. ಇಷ್ಟೆಲ್ಲ ಅಂಶಗಳು ಆ ಆಟದಲ್ಲಿ ಗೆಲ್ಲಲು ಅಥವಾ ಸೋಲಲು ಕಾರಣವಾಗುತ್ತವೆ.

ಹೀಗಿರುವಾಗ ನಾವು ಚೆನ್ನಾಗಿ ಆಡಿದ ಮಾತ್ರಕ್ಕೆ ಗೆಲುವು ದೊರಕಲೇಬೇಕು ಎಂದು ಹೇಳಲಾಗುವುದಿಲ್ಲ. ಏಕೆಂದರೆ ಇತರೆ ಅಂಶಗಳು ನಮಗೆ ವಿರುದ್ಧವಾಗಿರಬಹುದು. ಆದ್ದರಿಂದ ನಾವು ಗೆದ್ದೇ ಗೆಲ್ಲುತ್ತೇವೆ ಎಂಬ ಅಪೇಕ್ಷೆಯಿಂದಲೇ ಆಡಿದರೆ ನಿರಾಸೆ ಯಾಗಬೇಕಾಗುತ್ತದೆ. ಹಾಗೆಂದು ಆಟ ಬಿಡಲಾಗದು ಅಥವಾ ಚೆನ್ನಾಗಿ ಆಟವಾಡುವ, ಆಟಕ್ಕೆ ಬೇಕಾದ ಯೋಜನೆ ರೂಪಿಸು ವುದನ್ನು ಬಿಡಲಾಗದು. ಏಕೆಂದರೆ ಅದು ನಮ್ಮ ನಿಯಂತ್ರಣ ದಲ್ಲಿ ಇದೆ. ಅವನ್ನು ಸರಿಯಾಗಿ ನಿರ್ವಹಿಸದೆ ಇದ್ದರೆ, ಅದು ನಮ್ಮ ದೋಷವಾಗುತ್ತದೆ. ಆದ್ದರಿಂದ ನಾವು ಆಟವನ್ನು ಅತ್ಯಂತ ಉತ್ಸಾಹದಿಂದ, ಶ್ರದ್ಧೆಯಿಂದ, ಯೋಜನಾಯುಕ್ತವಾಗಿ ಆಡ ಬೇಕು. ನಮ್ಮ ಪ್ರಯತ್ನ ಶತ ಪ್ರತಿಶತ ಇರಬೇಕು. ಆದರೆ ಗೆಲುವು ಹಾಗೂ ಸೋಲು ನಮ್ಮ ನಿಯಂತ್ರಣದಲ್ಲಿ ಇಲ್ಲ ಎಂಬ ಅರಿವು ಇರಬೇಕು.

ಗೀತೆಯ ಈ ಒಂದು ಶ್ಲೋಕವನ್ನು ಸರಿಯಾಗಿ ಅರ್ಥ ಮಾಡಿಕೊಂಡಲ್ಲಿ ನಾವು ಯಾವುದೇ ಕಾರ್ಯರಂಗದಲ್ಲಿ ಇದ್ದರೂ ಅಲ್ಲಿ ಉದ್ವೇಗ, ಅಶಾಂತಿ, ಅಸಮಾಧಾನ ನಮಗೆ ಉಂಟಾಗು ವುದಿಲ್ಲ. ಮೇಲಾಗಿ ನಾವು ನಮ್ಮ ಶತ ಪ್ರತಿಶತ ಪ್ರಯತ್ನ ಮಾಡುವುದರಿಂದ ನಮ್ಮಲ್ಲಿನ ದಕ್ಷತೆ ಹಾಗೂ ಸಾಮರ್ಥ್ಯವು ವೃದ್ಧಿಯಾಗುತ್ತದೆ. ಹೀಗೆ ಫಲದ ಮೇಲೆ ಅನಾಸಕ್ತಿಯಿರಲಿ ಎಂಬು ದನ್ನೇ ಗೀತೆ ಹಲವಾರು ಯೋಗಗಳ ಮೂಲಕ, ಆಧ್ಯಾತ್ಮಿಕ ತತ್ತ್ವ ಹಾಗೂ ಸಿದ್ಧಾಂತಗಳ ಮೂಲಕ ನಮ್ಮ ಮುಂದಿಡುತ್ತದೆ. ಪ್ರಸ್ತುತ ಸಮಾಜಕ್ಕೆ ಈ ಕರ್ಮಯೋಗದ ಚಿಂತನೆಯ ಅಗತ್ಯ ಬಹಳ ಪ್ರಮಾಣದಲ್ಲಿ ಬೇಕಾಗಿದೆ.

### ಯಜ್ಞದ ಪರಿಕಲ್ಪನೆ

ಮೇಲಿನ ಶ್ಲೋಕದಲ್ಲಿ 'ಕರ್ಮಫಲಕ್ಕೆ ಕಾರಣನಾಗದೆ ಇರು' ಎಂಬ ಮಾತು ಕೂಡ ಇದೆ. ಸಾಮಾನ್ಯವಾಗಿ ಕೆಲಸ ಮಾಡಿದ ತರುವಾಯ ಅದರ ಫಲ ಬಂದಾಗ, ನಾವು ಅದು ನಮ್ಮಿಂದಲೇ ಆಗಿದ್ದು ಎಂದು ಬೀಗುತ್ತೇವೆ. ಆದರೆ ಆ ಕೆಲಸ ನಮ್ಮಿಂದ ಉಂಟಾಗಲು ಪೂರಕವಾಗಿ ಅದೆಷ್ಟು ಅಸಂಖ್ಯ ಜನರ ಕೊಡುಗೆ ಸಹಕಾರ ನಮಗೆ ದೊರಕಿದೆ ಎಂಬುದನ್ನು ನಾವು ಮರೆತುಬಿಡು ತ್ತೇವೆ. ಉದಾಹರಣೆಗೆ, ನಾವೊಂದು ಉತ್ತಮ ಉಪನ್ಯಾಸ ನೀಡಿ ದರೆ, ಅದಕ್ಕೆ ಮಾಹಿತಿ ಒದಗಿಸಿಕೊಟ್ಟ ಪುಸ್ತಕ, ಅದನ್ನು ಬರೆದಾತ, ಪುಸ್ತಕ ಪ್ರಕಟಿಸಿದಾತ, ಅದಕ್ಕೆ ನೆರವು ನೀಡಿದವರು, ಕಾಗದ, ಅದಕ್ಕೆ ಬೇಕಾದ ಕಾರ್ಖಾನೆಗಳು, ಅಲ್ಲಿನ ಕರ್ಮಚಾರಿಗಳು, ನಮಗೆ ಓದಲು ಬರೆಯಲು ಹೇಳಿಕೊಟ್ಟ ಶಿಕ್ಷಕರುಗಳು, ಅವರು ಗಳಿಗೆ ತರಬೇತಿ ನೀಡಿ ಪೋಷಿಸಿದ ಶಿಕ್ಷಾಸಂಸ್ಥೆಗಳು, ಅಲ್ಲಿನ ಕೆಲಸ ಗಾರರು, ಹಾಗೆಯೇ ನಮಗೆ ರಕ್ಷಣೆ ನೀಡುತ್ತಿರುವ ಸರ್ಕಾರ, ಕಾನೂನು, ಸೈನಿಕರು, ಪೊಲೀಸರು, ಅವರ ಕುಟುಂಬದವರು. ಹೀಗೆ ಅಸಂಖ್ಯಾತ ವ್ಯಕ್ತಿಗಳ ಕೊಡುಗೆ ನಾವು ಮಾಡುವ ಒಂದು ಸಣ್ಣ ಕೆಲಸದ ಹಿಂದೆ ಅಡಗಿರುತ್ತದೆ. ಇದು ಪ್ರತಿಯೊಂದು

ಕೆಲಸಕ್ಕೂ ಅನ್ವಯಿಸುತ್ತದೆ. ಇಷ್ಟೆಲ್ಲ ಸಹಕಾರ ದೊರೆತ ಮೇಲೆ ಆ ಕೆಲಸ ಪರಿಣಾಮಕಾರಿಯಾಗುತ್ತದೆ.

ಹೀಗಿರುವಾಗ ಆ ಕೆಲಸದ ಫಲಕ್ಕೆ ನಾನೊಬ್ಬನೇ ಅಧಿಕಾರಿ ಎಂದು ಭಾವಿಸುವುದು ಎಷ್ಟು ಸರಿ? ಹಾಗೆ ನಾವು ಭಾವಿಸಿ ವರ್ತಿಸಿದಲ್ಲಿ ಆಗ ನಾವು ಸ್ವಾರ್ಥಿಗಳಾಗುತ್ತೇವೆ. ಆದ್ದರಿಂದಲೇ ಗೀತೆಯಲ್ಲಿ ಯಜ್ಞದ ಪರಿಕಲ್ಪನೆಯನ್ನು ನೀಡಲಾಗಿದೆ. ಎಂದರೆ ನಾವು ಪ್ರತಿಯೊಬ್ಬರು ಕೂಡ ವಿಶ್ವದ ಪ್ರತಿಯೊಂದರ ಜೊತೆಗೆ ಸಾಮರಸ್ಯದಿಂದ ಬಾಳಬೇಕು ಹಾಗೂ ನಾವು ಮಾಡುವ ಪ್ರತಿ ಕೆಲಸದ ಫಲವನ್ನು ವಿಶ್ವದ ಪ್ರತಿಯೊಬ್ಬರ ಜೊತೆಗೆ ಹಂಚಿಕೊಳ್ಳಬೇಕು. ಈ ಅಂಶವನ್ನು ನಮ್ಮ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಗೆ ಮನದಟ್ಟು ಮಾಡಿಸಬೇಕು. ಆಗ ಮಾತ್ರವೇ ಭಾರತವು ಇಂದು ಎದುರಿಸುತ್ತಿರುವ ಲಂಚಕೋರತನ, ಭ್ರಷ್ಟಾಚಾರ, ಅನೈತಿಕತೆ ಹಾಗೂ ಇನ್ನು ಅನೇಕ ಸಮಸ್ಯೆಗಳನ್ನು ಪರಿಹರಿಸಬಹುದು.

''ನಾನು ಸಮಾಜದಿಂದ ನಿರ್ಮಾಣವಾಗಿದ್ದೇನೆ. ನನಗೆ ದೊರೆತ ಉದ್ಯೋಗ, ಸ್ಥಾನ ಮಾನ, ಸೌಲಭ್ಯ ಸವಲತ್ತುಗಳನ್ನು ಹಾಗೂ ಅದರ ಆದಾಯವನ್ನು ನನ್ನಿಂದ ಸಾಧ್ಯವಾದ ಮಟ್ಟಿಗೆ ನನ್ನ ಕುಟುಂಬದ ಹಾಗೂ ಸಮಾಜದ ಏಳ್ಗೆಗಾಗಿ ವಿನಿಯೋಗಿಸಲು ಪ್ರಯತ್ನಿಸುತ್ತೇನೆ.'' ವೈದ್ಯರು, ರಾಜಕೀಯ ಮುಖಂಡರು, ಶಿಕ್ಷಕರು, ವ್ಯಾಪಾರಸ್ಥರು, ಸಮಾಜದ ಪ್ರತಿಯೊಬ್ಬರೂ ಹೀಗೆ ಭಾವಿಸಿ ವರ್ತಿಸುವಂತಾಗಬೇಕು. ಆಗ ಮಾತ್ರವೇ ಭಾರತ ನಿಜವಾಗಿಯೂ ರಾಮರಾಜ್ಯವಾಗಬಲ್ಲುದು. ಈ ದೆಸೆಯಲ್ಲಿ ಗೀತೆಯ ಯಜ್ಞದ ಪರಿಕಲ್ಪನೆ ಅತ್ಯಂತ ಪ್ರಮುಖ ಪಾತ್ರ ವಹಿಸುತ್ತದೆ.

### ಉಪಸಂಹಾರ

ಗೀತೆಯ ಮತ್ತೊಂದು ಮುಖ್ಯವಾದ ಪರಿಕಲ್ಪನೆ ಸ್ವಧರ್ಮದ್ದು. ಇಂದು ಸಮಾಜದಲ್ಲಿ ಅನಾರೋಗ್ಯಕರವಾದ ಪೈಪೋಟಿ ಕಾಣುತ್ತಿದ್ದೇವೆ. ಬೆಳವಣಿಗೆಗಾಗಿ ಸ್ಪರ್ಧೆ ಒಳ್ಳೆಯದು. ಆದರೆ ಅದು ವೈಮನಸ್ಯ, ಮನಸ್ತಾಪ, ಅಸೂಯೆ, ಮೇಲು ಕೀಳೆಂಬ ಭಾವನೆ ಮುಂತಾದವುಗಳಿಗೆ ಎಡೆ ತೋರಬಾರದು. ಈ ಪೈಪೋಟಿಗೆ ಮುಖ್ಯ ಕಾರಣ ಒಂದು ಸ್ವಧರ್ಮದ ಪರಿಕಲ್ಪನೆ ಇಲ್ಲದಿರುವುದು ಹಾಗೂ ಇನ್ನೊಂದು ಇಂದ್ರಿಯ ಸುಖವನ್ನೇ ಜೀವನದ ಗುರಿಯಾಗಿ ಪರಿಗಣಿಸಿರುವುದು.

ಸ್ವಧರ್ಮ ಎಂದರೆ ಅದು ವ್ಯಕ್ತಿಯ ಸ್ವಭಾವ ಆಶ್ರಯಿಸಿ ನಿರ್ಧರಿಸಿರುವುದು. ಇದನ್ನೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂದು ಕರೆಯಲಾಗಿದೆ. ಇದು ಹುಟ್ಟಿನಿಂದ ಬರುವಂತಹ, ಪ್ರಸ್ತುತ ಸಮಾಜ ಎದುರಿಸುತ್ತಿರುವ ಜಾತಿಯೆಂಬ ಪಿಡುಗಲ್ಲ, ಬದಲಾಗಿ ಆಯಾ ವ್ಯಕ್ತಿಯ ಮನಃಸ್ಥಿತಿ ಹಾಗೂ ಸಾಮರ್ಥ್ಯ. ತನ್ನ ಸ್ವಭಾವಕ್ಕೆ ಪೂರಕವಾದ ಕ್ಷೇತ್ರಗಳಲ್ಲಿ ಕಾರ್ಯತತ್ಪರನಾದಾಗ ಆತ ತ್ವರಿತಗತಿಯಲ್ಲಿ ಯಶಸ್ಸನ್ನು ಗಳಿಸುತ್ತಾನೆ. ಸ್ವಾಮಿ ವಿವೇಕಾನಂದರು ಹೇಳುತ್ತಿದ್ದರು, ''ಓರ್ವ ರಾಜ ಚಪ್ಪಲಿ ಹೊಲೆಯುವ ಕೆಲಸ ಮಾಡಲಾರ. ಹಾಗೆಯೇ ಓರ್ವ ಚಪ್ಪಲಿ ಹೊಲೆಯುವವ ರಾಷ್ಟ್ರ ನಡೆಸಲಾರ. ಹೀಗಾಗಿ ಇಬ್ಬರೂ ಅವರವರ ಕ್ಷೇತ್ರದಲ್ಲಿ ಶ್ರೇಷ್ಠರೆ. ಹಾಗೂ ಇಬ್ಬರೂ ಸಮಾಜಕ್ಕೆ ಮುಖ್ಯ'' ಎಂದು. ಈ ಸಂಗತಿಯನ್ನು ಗೀತೆ 'ಸ್ವಧರ್ಮ' ಎಂದು ಕರೆದಿದೆ.

ಇನ್ನೊಂದು ಮುಖ್ಯ ಅಂಶವೆಂದರೆ ಜೀವನದ ಗುರಿ. ಅದು ಕೇವಲ ಇಂದ್ರಿಯ ಸುಖವೇ ಆದಲ್ಲಿ ಪೈಪೋಟಿ ತಪ್ಪಿದ್ದಲ್ಲ. ಇಂದ್ರಿಯ ಸುಖವನ್ನು ಅನುಭವಿಸೋಣ. ಆದರೆ ಅದೇ ಜೀವನದ ಸಾರಸರ್ವಸ್ವವಲ್ಲ. ಅದಕ್ಕೆ ಗೀತೆ 'ಸ್ಥಿತಪ್ರಜ್ಞ' ಎಂಬ ಅವಸ್ಥೆಯನ್ನು, ಮಾನಸಿಕ ಸ್ಥಿತಿಯನ್ನು ಜೀವನದ ಗುರಿಯಾಗಿ ಮುಂದಿರಿಸಿದೆ. ಸುಖ, ದುಃಖ, ಲಾಭ, ನಷ್ಟ, ಮಾನ, ಅಪಮಾನ ಇತ್ಯಾದಿ ಯಾವ ದ್ವಂದ್ವಕ್ಕೂ ಒಳಗಾಗದೆ, ಪ್ರಕೃತಿಯ ಅಡಿಯಾಳಾಗದೆ ನಮ್ಮಲ್ಲಿನ ಅನಂತ ಆನಂದದ ಸ್ವಾದ ಗಳಿಸುವುದೇ ಜೀವನದ ಗುರಿ.

ಪ್ರತಿಯೊಬ್ಬರೂ ತಮ್ಮ ತಮ್ಮ ಸ್ವಧರ್ಮವನ್ನು ಯಜ್ಞದೃಷ್ಟಿಯಿಂದ ಮಾಡುತ್ತಾ ಸಾಗಿದಲ್ಲಿ, ಅವರು ಜೀವನದಲ್ಲಿ ಇಂಥ ಅಮಿತ ಆನಂದದ ಅಧಿಕಾರಿಗಳಾಗುತ್ತಾರೆ ಎಂಬುದು ಗೀತೆಯ ಆಶ್ವಾಸನೆ. ಈ ನಿಟ್ಟಿನಲ್ಲಿ ಕೂಡ ಗೀತೆಯ ಸಂದೇಶ ಸಮಕಾಲೀನ ಭಾರತಕ್ಕೆ ಅತ್ಯಂತ ಮುಖ್ಯವಾಗುತ್ತದೆ. *

## ಶೀಲದ ಮಹತ್ವ

ಶೀಲದಿಂದಲೇ ಧರ್ಮ, ಸತ್ಯ, ನಡತೆ, ಬಲ, ಸಂಪತ್ತು ಎಲ್ಲವೂ ಲಭಿಸುವುದು. ಹಿಂದೆ ಪ್ರಹ್ಲಾದನು ಇಂದ್ರನನ್ನು ಗೆದ್ದು ತನ್ನ ಶೀಲದಿಂದ ಮೂರು ಲೋಕಗಳನ್ನು ವಶಪಡಿಸಿಕೊಂಡು ಆಳುತ್ತಿದ್ದನಂತೆ. ಆಗ ಇಂದ್ರನು ಬ್ರಾಹ್ಮಣವೇಷದಿಂದ ಅವನಲ್ಲಿಗೆ ಹೋಗಿ, ಶಿಷ್ಯವೃತ್ತಿಯಿಂದ ಅವನನ್ನು ಸಂತೋಷಪಡಿಸಿ ಅವನ ಶೀಲವನ್ನೇ ವರವಾಗಿ ಕೇಳಿ ಪಡೆದನಂತೆ. ಇಂದ್ರನು ಹೋದ ಕೂಡಲೆ, ಅವನ ಹಿಂದ ಪ್ರಹ್ಲಾದನ ದೇಹದಿಂದ ಒಂದು ತೇಜಸ್ಸಿನ ಮೂರ್ತಿ ಹೊರಗೆ ಹೊರಟದ್ದನ್ನು ನೋಡಿ ಪ್ರಹ್ಲಾದನು, ''ನೀನು ಯಾರು?'' ಎಂದು ಕೇಳಿದನಂತೆ. ಅದಕ್ಕೆ ಅದು, ''ನಾನು ಶೀಲ ; ನಿನ್ನನ್ನು ಬಿಟ್ಟು ಹೋಗುತ್ತಿದ್ದೇನೆ'' ಎಂದಿತಂತೆ. ಆಮೇಲೆ ಹೀಗಯೇ ತೇಜೋರೂಪಿನಿಂದ ಧರ್ಮವೂ ಸತ್ಯವೂ ನಡತೆಯೂ ಬಲವೂ ಸಂಪತ್ತೂ ಒಂದೊಂದಾಗಿ ಹೊರಟುಹೋದುವಂತೆ. ಆದ್ದರಿಂದ ಶೀಲವೇ ಸಕಲ ಶ್ರೇಯಸ್ಸಿಗೂ ಮೂಲ. ಮನಸ್ಸಿನಿಂದಾಗಲಿ ದೇಹದಿಂದಾಗಲಿ ಯಾರಿಗೂ ಕೆಡುಕು ಮಾಡಬಾರದು; ಆದಷ್ಟು ಉಪಕಾರವನ್ನೂ ದಾನವನ್ನೂ ಮಾಡಬೇಕು.

*'ವಚನಭಾರತ' ದಿಂದ, ಪು. ೩೭೯–೮೦*